# ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕುಶಾಲನಗರ.

ಉಪಸ್ಥಿತರು : ಶ್ರೀಮತಿ ಚೈತ್ರ ಎಲ್, ಬಿ.ಬಿ.ಎಂ. ಎಲ್.ಎಲ್.ಬಿ .,
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂಎಫ್‌ಸಿ,
ಕುಶಾಲನಗರ

ದಿನಾಂಕಃ **21** ನೇ ಏಪ್ರಿಲ್ **2026**

ಸಿ.ಸಿ. ನಂ: **1592/2024**

ಪಿರ್ಯಾದುದಾರರು : ಕರ್ನಾಟಕ ಸರ್ಕಾರದ ಪರವಾಗಿ
ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆ.

(ಸಹಾಯಕ ಸರ್ಕಾರಿ ಅಭಿಯೋಜಕರು)

ವಿರುದ್ಧ

ಆರೋಪಿ : ಮಂಜುನಾಥ ಹೆಚ್.ಎಸ್.
ತಂದೆ: ಸೋಮಣ್ಣ,
**39** ವರ್ಷ,
ವಾಸ: ಹೆಬ್ಬಾಲೆ ಗ್ರಾಮ, ಕುಶಾಲನಗರ.

(ಪ್ರತಿನಿಧಿಸುವವರು ಶ್ರೀ ಹೆಚ್.ಇ ಪವನ್ ಸಾಗರ್
ವಕೀಲರು)

::ತೀರ್ಪು::

ಠಾಣಾಧಿಕಾರಿ. ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆ ಇವರು ಆರೋಪಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ 78, 352, 351(2), 324(3) ರಡಿಯಲ್ಲಿ ದೋಷಾ ರೋಪಣಪತ್ರ ಸಲ್ಲಿಸಿರುತ್ತಾರೆ.

2. ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆ:

ದಿನಾಂಕ3.10.2024 ರಂದು ಸಮಯ ಸಂಜೆ 4.00 ಗಂಟೆಗೆ ಚಾಸಾ 1 ರವರು ಪೂರ್ವಿಕ ಮೊಬೈಲ್ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿರುವಾಗ ಆರೋಪಿಯು ಚಾಸಾ 1 ರವರ ಅಂಗಡಿಗೆ ಬಂದು ಚಾಸಾ 1 ರವರನ್ನು ಕೆಟ್ಟದಾಗಿ ನೋಡುತ್ತಾ ಸೂಳೆ ಮುಂಡೆ, ಬೇವರ್ಸಿ, ಎಂದು ಅವ್ಯಾಚ ಶಬ್ದಗಳಿಂದ ಬೈದು, ನೀನು ಏಕೆ ನನ್ನ ಮೊಬೈಲ್ ನಂಬರ್ ಅನ್ನು ಬ್ಲಾಕ್ ಲಿಸ್ಟ್ ಗೆ ಹಾಕಿದ್ದೀಯಾ? ನನ್ನ ಜೊತೆ ನೀನು ಮಾತನಾಡದಿದ್ದರೆ ನಿಮ್ಮ ಮೇಲೆ ಅಪಪ್ರಚಾರ ಮಾಡಿ ನಿನ್ನನ್ನು ಸುಮ್ಮನೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುವುದ್ದಲ್ಲದೇ, ಈ ಹಿಂದಿನಿಂದಲೂ ಚಾಸಾ 1 ರವರು ಅಂಗಡಿಗೆ ಹೋಗುವಾಗ ಹಿಂದಿನಿಂದ ಹಿಂಬಾಲಿಸಿಕೊಂಡು ಅಂಗಡಿಗೆ ಹೋಗಿ ಅಸಭ್ಯವಾಗಿ ನೋಡುವುದು ಅಶ್ಲೀಲವಾಗಿ ಮಾತನಾಡಿಸುತ್ತಾ ಲೈಂಗಿಕ ಮತ್ತು ಮಾನಸಿಕ ಕಿರುಕುಳ ನೀಡುತ್ತಿದ್ದು, ಅಂಗಡಿಯ ಶೋಕೇಸ್ ಗೆ ಅಳವಡಿಸಿದ ಗ್ಲಾಸ್ ಅನ್ನು ಒಡೆದು ಹಾಕಿ ಇದರಿಂದ ಸುಮಾರು 15 ರಿಂದ 20 ಸಾವಿರ ರೂ ನಷ್ಟವನ್ನುಂಟು ಮಾಡಿರುವ ಕಾರಣ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ತನಿಖೆ ನಡೆಸಿರುವ ಕುಶಾಲನಗರ ಗ್ರಾಮಾಂತರ ಪೋಲಿಸ್ ಠಾಣೆಯವರು ಆರೋಪಿ ವಿರುದ್ಧ ದೋಷಾ ರೋಪಣಾಪತ್ರವನ್ನು ಸಲ್ಲಿಸಿರುತ್ತಾರೆ.

3. ತದನಂತರ ನ್ಯಾಯಾಲಯವು ದೋಷಾರೋಪಣಾಪಟ್ಟಿಯ ಅಂಶಗಳು ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ನೋಟಕ್ಕೆ ಆರೋಪಿ ಮೇಲಿನ

ಆರೋಪವು ಕಂಡುಬಂದ ಕಾರಣದಿಂದ ನ್ಯಾಯಾಲಯವು ಭಾ.ನಾ.ಸು.ಸಂಹಿತೆ ಕಲಂ 210 ರಡಿಯಲ್ಲಿ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿಗೆ ಸಮನ್ಸ್ ಜಾರಿ ಮಾಡಿರುತ್ತದೆ. ಆರೋಪಿಯು ನ್ಯಾಯಾಲಯದಲ್ಲಿ ತಮ್ಮ ವಕೀಲರ ಮೂಲಕ ಹಾಜರಾಗಿದ್ದು ಜಾಮೀನು ಪಡೆದು ಕೊಂಡಿರುತ್ತಾರೆ, ಅವರಿಗೆ ಅದೇ ದಿನ ಭಾ.ನಾ.ಸು.ಸಂಹಿತೆ ಕಲಂ 230 ರ ಪ್ರಕಾರ ಸಂಪೂರ್ಣವಾದ ದೋಷಾ ರೋಪಣಾ ಪಟ್ಟಿಯ ದಾಖಲೆಗಳನ್ನು ಒದಗಿಸಿರುತ್ತದೆ. ತದ ನಂತರದಲ್ಲಿ ಆರೋಪಿಯ ವಿರುದ್ಧ ದೋಷಾರೋಪಣೆಯನ್ನು ರಚಿಸಿ, ಆರೋಪಿಗೆ ಓದಿ ಹೇಳಿದ್ದು, ಅವರು ತಾವುಗಳು ಯಾವುದೇ ತಪ್ಪು ಮಾಡಿಲ್ಲವೆಂದು ವಿಚಾರಣೆ ಆಗ ಬೇಕೆಂದು ವಿನಂತಿಸಿಕೊಂಡಿರುತ್ತಾರೆ. ಆದಕಾರಣದಿಂದ ಪ್ರಕರಣದ ವಿಚಾರಣೆ ಕಾಯ್ದಿರಿಸಲಾಯಿತು.

4. ಅಭಿಯೋಜನಾಪಕ್ಷದವರು ತಮ್ಮ ಪ್ರಕರಣವನ್ನು ಸಾಬೀತು ಪಡಿಸುವ ಉದ್ದೇಶದಿಂದ ದೋಷಾರೋಪಣಾಪತ್ರದಲ್ಲಿ ತಿಳಿಸಿರುವ ಸಾಕ್ಷಿದಾರರಾದ ಸಂತ್ರಸ್ತೆ ಚಾಸಾ–1 ರವರನ್ನು ಫ್ರಾಸಾ–1 ಎಂದು ಹಾಜರುಪಡಿಸಿ ವಿಚಾರಣೆಗೆ ಒಳಪಡಿಸಿರುತ್ತಾರೆ ಹಾಗೂ ನಿಪಿ–1 ಮತ್ತು ನಿಪಿ 2 ರ ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ ಮತ್ತು ನ್ಯಾಯಾಲಯದಲ್ಲಿ ಚಾಸಾ–1 ರವರು ಅಭಿಯೋಜನೆಯ ಪ್ರಕರಣದ ವಿರುದ್ಧವಾಗಿ ಸಾಕ್ಷ್ಯ ನೀಡಿದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡಿದರೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಸಹಾಯಕವಾಗುವುದಿಲ್ಲವೆಂದು ಅಭಿಯೋಜನೆಯವರಿಗೆ ಕಂಡು ಬಂದ ಕಾರಣ ಅವರುಗಳ ಸಾಕ್ಷ್ಯ ವಿಚಾರಣೆಯನ್ನು ಕೈ ಬಿಡಲಾಯಿತು.

5. ಅಭಿಯೋಜನೆಯ ಪ್ರಮುಖ ಸಾಕ್ಷಿದಾರರು ಪ್ರತಿಕೂಲ ಸಾಕ್ಷ್ಯವನ್ನು ನೀಡಿರುವುದರಿಂದ ಭಾ.ನಾ.ಸು.ಸಂ.ಕಲಂ 351 ರಡಿಯಲ್ಲಿ ಆರೋಪಿಯನ್ನು ಪ್ರಶ್ನಿಸಿ ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುವುದಿಲ್ಲ. ಚಾಸಾ–1 ರವರು ನ್ಯಾಯಾಲಯದ

ಮುಂದೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುವುದರಿಂದ ಮುಖ್ಯ ವಾದಮಂಡನೆಗೆ ಪ್ರಕರಣವನ್ನು ಕಾಯ್ದಿರಿಸಿಕೊಳ್ಳಲಾಯಿತು.

6. ದೋಷಾರೋಪಣೆಯ ಅಂಶಗಳನ್ನು ಮತ್ತು ಅಭಿಯೋಜನೆಯ ಪರ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿದಾಗ ನನ್ನ ಗಮನಕ್ಕೆ ಈ ಕೆಳಕಂಡ ಅಂಶಗಳು ಮೂಡಿ ಬಂದಿರುತ್ತವೆ:

:ಅಂಶಗಳುಃ

**ಅಂಶ1:** ದಿನಾಂಕ 3.10.2024 ರಂದು ಸಮಯ ಸಂಜೆ 4.00 ಗಂಟೆಗೆ ಕುಶಾಲನಗರ ಗ್ರಾಮಾಂತರ ಪೋಲಿಸ್ ಠಾಣಾ ಸರಹದ್ದಿಗೆ ಸೇರಿದ ಹೆಬ್ಬಾಲೆ ಗ್ರಾಮ ಪಂಚಾಯ್ತಿ ಕಟ್ಟಡದಲ್ಲಿರುವ ಪೂರ್ವಿಕ ಮೊಬೈಲ್ ಅಂಗಡಿಯಲ್ಲಿ ಚಾಸಾ 1 ರವರು ಪೂರ್ವಿಕ ಮೊಬೈಲ್ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿರುವಾಗ ಆರೋಪಿಯು ಅಂಗಡಿಗೆ ಬಂದು ಚಾಸಾ 1 ರವರನ್ನು ಕೆಟ್ಟದಾಗಿ ನೋಡುತ್ತಾ, ಸೂಳೆ ಮುಂಡೆ, ಬೇವರ್ಸಿ, ಎಂದು ಅವ್ಯಾಚ ಶಬ್ದಗಳಿಂದ ನಿಂದಿಸಿರುವ ಬಗ್ಗೆ ಅಭಿಯೋಜಕರು ಭಾರತೀಯ ನ್ಯಾಯ ಸಂಹಿತೆ ಕಲಂ 352 ಅಡಿಯಲ್ಲಿ ಯುಕ್ತ ಸಂದೇಹಕ್ಕಿಂತ ಮೇಲಾಗಿ ಸಾಬೀತುಪಡಿಸಿದ್ದಾರೆಯೇ?

ಅಂಶ–2: ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿಯು ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ, ಚಾಸಾ 1 ರವರು ಕುರಿತು ನೀನು ಏಕೆ ನನ್ನ ಮೊಬೈಲ್ ನಂಬರ್ ಅನ್ನು ಬ್ಲಾಕ್ ಲಿಸ್ಟ್ ಗೆ ಹಾಕಿದ್ದೀಯಾ? ನನ್ನ ಜೊತೆ ಮಾತನಾಡದಿದ್ದರೆ ನಿನ್ನ ಮೇಲೆ ಅಪಪ್ರಚಾರ ಮಾಡಿ ನಿನನ್ನು ಸುಮ್ಮನೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುವ ಬಗ್ಗೆ ಅಭಿಯೋಜಕರು ಭಾರತೀಯ ನ್ಯಾಯ ಸಂಹಿತೆ ಕಲಂ 351(2) ಅಡಿಯಲ್ಲಿ ಯುಕ್ತ ಸಂದೇಹಕ್ಕಿಂತ ಮೇಲಾಗಿ ಸಾಬೀತುಪಡಿಸಿದ್ದಾರೆಯೇ?

ಅಂಶ – 3:ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿಯು ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ, ಈ ಹಿಂದಿನಿಂದಲೂ ಚಾಸ 1 ರವರು ಅಂಗಡಿಗೆ ಹೋಗುವಾಗ ಹಿಂದಿನಿಂದ ಹಿಂಬಾಲಿಸಿಕೊಂಡು ಅಂಗಡಿಗೆ ಹೋಗಿ ಅಸಭ್ಯವಾಗಿ ನೋಡುವುದು ಅಶ್ಲೀಲವಾಗಿ ಮಾತನಾಡಿಸುತ್ತಾ ಲೈಂಗಿಕ ಮತ್ತು ಮಾನಸಿಕ ಕಿರುಕುಳ ನೀಡುತ್ತಿರುವ ಬಗ್ಗೆ ಅಭಿಯೋಜಕರು ಭಾರತೀಯ ನ್ಯಾಯ ಸಂಹಿತೆ ಕಲಂ 78 ಅಡಿಯಲ್ಲಿ ಯುಕ್ತ ಸಂದೇಹಕ್ಕಿಂತ ಮೇಲಾಗಿ ಸಾಬೀತುಪಡಿಸಿದ್ದಾರೆಯೇ?

ಅಂಶ – 4:ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿಯು ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ, ಪೂರ್ವಿಕ ಮೊಬೈಲ್ ಅಂಗಡಿಯ ಶೋಕೇಸ್ ಗೆ ಅಳವಡಿಸಿದ ಗ್ಲಾಸ್ನನ್ನು ಒಡೆದು ಹಾಕಿದ್ದು ಇದರಿಂದ ಸುಮಾರು 15 ರಿಂದ 20 ಸಾವಿರ ನಷ್ಟಪಡಿಸಿರುವ ಬಗ್ಗೆ ಅಭಿಯೋಜಕರು ಭಾರತೀಯ ನ್ಯಾಯ ಸಂಹಿತೆ ಕಲಂ 324(3) ಅಡಿಯಲ್ಲಿ ಯುಕ್ತ ಸಂದೇಹಕ್ಕಿಂತ ಮೇಲಾಗಿ ಸಾಬೀತುಪಡಿಸಿದ್ದಾರೆಯೇ?

ಅಂಶ – 5: ಯಾವ ಆದೇಶ?

7. ಅಭಿಯೋಜನೆಯ ಪಕ್ಷದ ಪರವಾಗಿ ಸಹಾಯಕ ಸರ್ಕಾರಿ ವಕೀಲರ ವಾದವನ್ನು ಕೇಳಲಾಯಿತು, ಅದೇ ರೀತಿ ಆರೋಪಿಯ ಪರವಾಗಿ ಆರೋಪಿಯ ಪರ ವಕೀಲರ ವಾದವನ್ನು ಕೇಳಲಾಯಿತು ಮತ್ತು ನ್ಯಾಯಾಲಯದ ಮುಂದಿರುವ ಸಂಪೂರ್ಣ ಕಡತವನ್ನು ಪರಿಶೀಲಿಸ ಲಾಯಿತು. ಪಿರ್ಯಾದುದಾರರ ಎಲ್ಲಾ ಮೌಖಿಕ ಹಾಗೂ ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು. ಈ ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

ಅಂಶ.1: ನಕರಾತ್ಮಕವಾಗಿ
ಅಂಶ.2: ನಕರಾತ್ಮಕವಾಗಿ
ಅಂಶ 3: ನಕರಾತ್ಮಕವಾಗಿ
ಅಂಶ.4: ನಕರಾತ್ಮಕವಾಗಿ
ಅಂಶ.5: ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ
ಅಂತಿಮ ಆದೇಶದಂತೆ

: ಕಾರಣಗಳು :

ಅಂಶ 1 ರಿಂದ 4:– ಅಂಶ 1 ರಿಂದ 4 ಒಂದನ್ನೊಂದು ಅವಲಂಬಿಸಿರುತ್ತದೆ ಹಾಗೂ ಅವುಗಳನ್ನು ಉತ್ತರಿಸುವಾಗ ಒಂದೇ ರೀತಿ ಆದಂತಹ ಚರ್ಚೆ, ವಿಮರ್ಶೆ ಅವಶ್ಯಕತೆ ಇರುತ್ತದೆ, ಹಾಗೂ ಅವುಗಳಿಂದ ಪುನರಾವರ್ತನೆಯನ್ನು ತಡೆಗಟ್ಟುವ ಸಲುವಾಗಿ ಈ ನಾಲ್ಕು ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

8. ಆರೋಪಿ ವಿರುದ್ದ ಹೊರಿಸಲಾದ ಆರೋಪವನ್ನು ಸಾಬೀತುಪಡಿಸಲು ಅಭಿಯೋಜನೆಯವರು ಚಾಸಾ 1 ರವರನ್ನು ವಿಚಾರಣೆಗೆ ಒಳಪಡಿಸಿರುತ್ತಾರೆ. ಈ ಪ್ರಕರಣದ ಪಿರ್ಯಾದುದಾರರಾದ ಚಾಸಾ–1 ಕೋಮಲಾ ರವರನ್ನು ಫ್ರಾಸಾ–1 ಎಂದು ತಮ್ಮ ಮುಖ್ಯ ವಿಚಾರಣೆಯಲ್ಲಿ ತಿಳಿಸುತ್ತಾ ಚಾಸಾ 2 ರಿಂದ 5 ರವರು ತನಗೆ ಗೊತ್ತು . ನ್ಯಾಯಾಲಯದ ಮುಂದೆ ಇರುವ ಆರೋಪಿ ತನಗೆ ಗೊತ್ತು. ದೂರು ಮತ್ತು ಪಂಚನಾಮೆಯನ್ನು ನಿಪಿ 1 ಮತ್ತು ನಿಪಿ 2 ಎಂದು ಗುರುತಿಸಿದ್ದು ಮುಂದುವರಿದು ತನ್ನ ಮತ್ತು ಆರೋಪಿ ಮದ್ಯೆ ಯಾವುದೇ ಗಲಾಟೆ ಆಗಿರುವುದಿಲ್ಲ ಹಾಗೂ ಆರೋಪಿ ಕೊಲೆ ಬೆದರಿಕೆ ಹಾಕಿರುವುದಿಲ್ಲ ಹಾಗೂ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಹಾಗು ಯಾವುದೆ ಕಿರುಕುಳ ಕೊಟ್ಟಿರುವುದಿಲ್ಲ ಮತ್ತು ಯಾವುದೇ ನಷ್ಟ ಉಂಟು ಮಾಡಿರುವುದಿಲ್ಲ. ಪೋಲಿಸರಿಗೆ ತಾನು ಯಾವುದೇ ದೂರನ್ನು ಕೊಟ್ಟಿರುವುದಿಲ್ಲ. ತನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ. ಈ ಪ್ರಕರಣದ ವಿಚಾರ ತನಗೆ ಗೊತ್ತಿಲ್ಲ. ತಾನು ನ್ಯಾಯಾಧೀಶರ ಮುಂದೆ ಯಾವುದೆ ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ತಮ್ಮ ಮುಖ್ಯ ವಿಚಾರಣೆಯಲ್ಲಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಅಂಶಗಳನ್ನು ಪರಿಶೀಲಿಸಿದಾಗ ಪಿರ್ಯಾದಿಯೇ ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ ಎಂದು ಕಂಡು ಬಂದಿರುತ್ತದೆ.

9. ಫ್ರಾಸಾ–1 ರವರು ತಮ್ಮ ಮುಖ್ಯ ವಿಚಾರಣೆಗಳಲ್ಲಿ ಅಭಿಯೋಜನೆಯ ಪ್ರಕರಣದ ವಿರುದ್ದ ಸಾಕ್ಷ್ಯ ನುಡಿದ ಕಾರಣ ಸದರಿ ಸಾಕ್ಷಿಗಳನ್ನು ಮಾನ್ಯ ಸಹಾಯಕ

ಸರ್ಕಾರಿ ಅಭಿಯೋಜಕರು ಸಂಪೂರ್ಣ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಿದಾಗಲೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಸಹಾಯಕವಾಗುವಂತಹ ಯಾವುದೇ ಸಾಕ್ಷ್ಯವನ್ನು ಫ್ರಾಸಾ–1 ರವರು ನುಡಿದಿರುವುದಿಲ್ಲ ಹಾಗೂ ನಿಪಿ–1 ಮತ್ತು ನಿಪಿ 2 ರಲ್ಲಿರುವ ಸಂಗತಿಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದು, ಫ್ರಾಸಾ 1 ರವರು ನಿಪಿ–1 ಮತ್ತು ನಿಪಿ 2 ರಲ್ಲಿರುವ ಅಂಶಗಳನ್ನು ಸಂಪೂರ್ಣವಾಗಿ ನಿರಾಕರಿಸಿರುತ್ತಾರೆ.

10.. ಈ ಪ್ರಕರಣದ ದೂರುದಾರರು ಈ ಕೇಸಿಗೆ ಸಂಬಂಧಿಸಿದಂತೆ ಪೂರಕವಾದ ಯಾವುದೇ ಅಂಶವನ್ನು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದಿಲ್ಲ. ಈ ಮೇಲ್ಕಂಡ ಕಾರಣಗಳಿಂದ ಆರೋಪಿ ಮೇಲ್ಕಂಡ ಆರೋಪಗಳನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ನಂಬಲಾರ್ಹವಾದ ಹಾಗೂ ಕಾನೂನುಬದ್ಧವಾದ ಸಾಕ್ಷ್ಯಧಾರಗಳಿಂದ ರುಜುವಾತುಪಡಿಸಲಾಗದ ಕಾರಣ ಸಂಶಯದ ಲಾಭವನ್ನು ಆರೋಪಿಗೆ ನೀಡಲಾಗಿರುತ್ತದೆ ಮತ್ತು ಅಂಶ–1 ರಿಂದ ಅಂಶ–4 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

11. ಅಂಶ5. : ಅಂಶ 1 ರಿಂದ 4 ಕ್ಕೆ ನೀಡಿರುವ ವಿವರವಾದ ಚರ್ಚೆ ಮತ್ತು ಅವುಗಳಿಗೆ ನೀಡಿರುವ ಕಾರಣಗಳಿಗೆ ಅಂಶ.5 ಕ್ಕೆ ಈ ಕೆಳಗಿನಂತೆ ಆದೇಶ ಮಾಡುತ್ತೇನೆ.

## :ಆದೇಶ :

ಭಾ. ನಾ. ಸು. ಸಂಹಿತೆ ಕಲಂ 271(1) ರಡಿ ಯಲ್ಲಿ ಪ್ರದತ್ತವಾದ ಹಕ್ಕನ್ನು ಚಲಾಯಿಸಿ ಆರೋಪಿಯ ವಿರುದ್ಧ ಆರೋಪಿಸಲಾದ ಭಾರತೀಯ ನ್ಯಾಯ ಸಂಹಿತೆ ಕಲಂ 78, 352, 351(2), 324(3) ರಡಿಯಲ್ಲಿ ಆರೋಪಗಳಿಂದ ಆರೋಪಿಯನ್ನು ದೋಷಮುಕ್ತಗೊಳಿಸಿ ನಿರಪರಾದಿ ಎಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿ ಮತ್ತು ಜಾಮೀನುದಾರರು ಬರೆದು ಕೊಟ್ಟಿರುವ ಜಾಮೀನು ಮುಚ್ಚಳಿಕೆಯನ್ನು ಭಾ.ನಾ.ಸು.ಸಂಹಿತೆ.ಕಲಂ 481 ರಡಿಯಲ್ಲಿ ಈ ದಿನ ದಿಂದ 6 ತಿಂಗಳವರೆಗೆ ಮುಂದುವರೆಸಲಾಗಿದೆ.

ಸ್ವತ್ತು ಪಟ್ಟಿ ಸಂಖ್ಯೆ 137/2024 ದಿನಾಂಕ04.10.2024 ರಲ್ಲಿರುವ ಶೋಕೇಸಿನ ಒಡೆದ ಗಾಜಿನ ಚೂರುಗಳು ಅನುಪಯುಕ್ತ ವಸ್ತುವಾದ ಕಾರಣ ಅಪೀಲು ಅವಧಿ ಮುಗಿದ ನಂತರ ನಾಶಗೊಳಿಸಲು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, ನಂತರ ಮುಕ್ತ ನ್ಯಾಯಾಲದಲ್ಲಿ ದಿನಾಂಕ **21** ನೇ ಏಪ್ರಿಲ್ **2026** ರಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).

sd/xxx
(ಚೈತ್ರ ಎಲ್, )
ಸಿವಿಲ್ ನ್ಯಾಯಾಧೀಶರು
ಮತ್ತು.ಜೆ.ಎಂ.ಎಫ್.ಸಿ, ಕುಶಾಲನಗರ

::ಅನುಬಂಧ::

1. ಆಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು :

ಫ್ರಾಸಾ–1 : ಕೋಮಲ

2. ಅಭಿಯೋಜನಾ ಪರ ಹಾಜರುಪಡಿಸಿದ ದಾಖಲೆಗಳು:

ನಿಶಾನೆ ಪಿ.1 : ದೂರು

ನಿಶಾನೆ ಪಿ.1(ಎ) : ಫ್ರಾಸಾ–1 ರವರ ಸಹಿ

ನಿಶಾನೆ ಪಿ.2 : ಮಹಜರು

ನಿಶಾನೆ ಪಿ.2(ಎ) : ಫ್ರಾಸಾ–1 ರವರ ಸಹಿ

3. ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು:ಇಲ್ಲ–

4. ಆರೋಪಿತರ ಪರ ಹಾಜರುಪಡಿಸಿದ ದಾಖಲೆಗಳು: ಇಲ್ಲ–

5. ಸಾಕ್ಷಿ ಕಾಲಕ್ಕೆ ಗುರುತಿಸಲಾದ ಮುದ್ದೇಮಾಲುಗಳು : ಇಲ್ಲ–

sd/xxx

ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕುಶಾಲನಗರ